ನಗುತ್ತಲೇ ಇದನ್ನೆಲ್ಲಾ ನೋಡುತ್ತಿದ್ದ ನಮ್ಮ ಅಪ್ಪ, "ಹಿಂಗೇ ಬಿಟ್ರೆ ಬೆಟ್ಟದಾಗಿರೋ ಕರಡಿಗುಳುಗೂ ಮಾತ್ ಕಲುಸ್ಬಿಯಾ ರಂಗಮ್ಮೋ" ಎಂದಿತು.

ಅವರ ಮನೆ ನಾಯಿಯಂತೂ ಈಕೆಯ ಮಕ ಕಂಡರೆ ಸಾಕು ಸುಮ್ಮನೆ ಕುಂತುಬಿಡುತ್ತಿತ್ತು. ಅದಕ್ಕೆ ಕಾರಣವೂ ಇತ್ತು. ಒಂದು ರಾತ್ರಿ ಮೂಡುಗಡೆಗೆ ಮುಖ ಮಾಡಿಕೊಂಡು ಒಂದೇ ಸಮನೆ ಬೊಗಳುತ್ತಿತ್ತಂತೆ. ಎಷ್ಟು ಹೊತ್ತಾದರೂ ಇದರ ಬೊಗಳಾಟ ನಿಲ್ಲಲಿಲ್ಲ. ನಿದ್ದೆ ಕೆಟ್ಟಿದ್ದರಿಂದ ಎದ್ದು ಬಂದ ಪುಲ್ಲಕ್ಕ, "ಮುಚ್ ಬಾಯ್ ಕುಳ್ಡ ನಾಯಿಗುಟ್ಟಿದ್ದೆ, ಏನ್ ಕಾಮ್ರಾ ಐತೆ ಅಲ್ಲಿ. ನಮಗೇ ಹೊಟ್ಟುಂಬ ಉಣ್ಣಕೆ ಹಿಟ್ಟಿಲ್ಲ, ಇಂಥಾ ಊರ್ಗೆ ಕಳ್ರು ಎಲ್ಲಿಂದ ಬತ್ತರೆ" ಎಂದು ಬೈದಿದ್ದೇ ಅಲ್ಲದೆ ಕೈಗೆ ಸಿಕ್ಕ ಮಂಕರಿಯನ್ನು ತೆಗೆದು ಎಸೆದಳು. ಬೊಗಳಿದರೆ ಶಾಭಾಸ್‌ಗಿರಿ ಸಿಗುವುದಿಲ್ಲವೆಂದು ಖಾತ್ರಿಯಾದ ನಾಯಿ ಈಕು ಬಿದ್ದು ಆವತ್ತಿನಿಂದ ಪುಲ್ಲಕ್ಕ ಕಂಡ ತಕ್ಷಣ ಸುಮ್ಮನಾಗಿಬಿಡುತ್ತಿತ್ತು.

ಪುಲ್ಲಕ್ಕನ ಮಿತಭಾಷಿ ಗಂಡ ಹನುಮಂತಣ್ಣ ಈ ಪ್ರಸಂಗವನ್ನು ಸಿಕ್ಕ ಸಿಕ್ಕವರಿಗೆಲ್ಲಾ ಹೇಳಿಕೊಂಡು ನಕ್ಕಿದ್ದರಿಂದ ನನ್ನ ಕಿವಿಗೂ ಬಿದ್ದಿತ್ತು.

ಯಾರಮನೆಯಲ್ಲಾದರೂಸಾವಾಗಿಸಂಕಟಅನುಭವಿಸುತ್ತಿದ್ದರೆಅವರನ್ನುಸಮಾಧಾನಪಡಿಸುತ್ತಿದ್ದ ಬೆಲ್ಲಂಪುಲ್ಲಕ್ಕನ ವಿಧಾನ ವಿಶಿಷ್ಟವಾಗಿರುತ್ತಿತ್ತು. ಗದರಿಸುತ್ತಲೇ ಮನೆ ಒಳಕ್ಕೆ ನುಗ್ಗುತ್ತಿದ್ದಳು. ಅಳುತ್ತಾ ಕುಂತವರನ್ನು ಬೈಯುತ್ತಿದ್ದಳು. ಆ ಮನೆಗೆ ಇಂಥಾ ಸ್ಥಿತಿ ತಂದ ಆ ಸತ್ತವರನ್ನೂ ಬೈಯುತ್ತಿತ್ತು. "ಇಟ್ಟುಣ್ಣದೆ ಕೂಕಂಡ್ರೆ ಸತ್ತೋದೋನು ಎದ್ ಬತ್ತನಾ, ಬರಂಗಿದ್ರೆ ಹೇಳು, ನಿನ್ ಕೂಟೆ ನಾನು ಉಪಾಸ ಮಾಡ್ತೀನಿ, ಇಲ್ಲಾ ಅಂದ್ರೆ ಎದ್ ಎಳ್ಡ್ ತುತ್ತು ಬಾಯಿಗಿಕ್ಕ" ಎಂದು ಜೋರು ಮಾಡುತ್ತಾ ಗಂಗಳದಲ್ಲಿ ಮುದ್ದೆಯನ್ನೋ ಅನ್ನವನ್ನೋ ಕಲೆಸಿ ತಿನ್ನಿಸುತ್ತಿತ್ತು. ಈಕೆಯ ಗದರಿಕೆಗೋ ಪ್ರೀತಿಗೋ ಹೆದರಿ ಅವರು ಊಟಮಾಡುತ್ತಿದ್ದರು. ಅಷ್ಟೇ ಅಲ್ಲ, ಒಂದೆರಡು ದಿನದಲ್ಲಿ ಸಲೀಸಾಗುತ್ತಿದ್ದರು. ಬಾಯಿ ತೆಗೆದರೆ ಸಾಕು ಈಕೆಯ ಬಾಯಿಂದ ಗಾದೆಗಳು, ಒಗಟುಗಳು ಪುತ ಪುತ ಉದುರುತ್ತಿದ್ದವು. ಎಲ್ಲಾದರೂ ಗೊಳ್ ಅಂತ ನಗುವಿನ ಶಬ್ದ ಬರುತ್ತಿದ್ದರೆ ಅಲ್ಲಿ ಬೆಲ್ಲಂಪುಲ್ಲಕ್ಕ ಇದ್ದಾಳೆಂದೇ ಅರ್ಥ. ಆಕೆಯೊಂದಿಗೆ ಕೂಲಿಗೆ, ಸಂತೆಗೆ, ಇಸ್ತ್ರಿ ಎಲೆ ಮಾರಾಟಕ್ಕೆ ಹೋಗಲು ಇತರೆ ಹೆಣ್ಣುಮಕ್ಕಳು ಹಾತೊರೆಯುತ್ತಿದ್ದರು. ಸದಾ ಮಾತನ್ನೇ ಹಾಸಿ ಹೊದೆಯುತ್ತಿದ್ದ ಬೆಲ್ಲಂಪುಲ್ಲಕ್ಕನಿಗೆ ಗಂಟೆಗೊಂದು ಜಾವಕ್ಕೊಂದು ಮಾತಾಡುವ ಗಂಡ ಹನುಮಂತಣ್ಣ ತಕ್ಕ ಜೊತೆ. ಎರಡು ಹೆಣ್ಣು, ಎರಡು ಗಂಡು. ಅವರದೂ ಕಮ್ಮಿ ಮಾತು. ಏಕೆಂದರೆ ಇದ್ದ ಬದ್ದ ಮಾತುಗಳೆಲ್ಲಾ ಬೆಲ್ಲಂಪುಲ್ಲಕ್ಕನ ಬಳಿಯೇ ಇದ್ದವಲ್ಲ.

## ಮಲ್ಲಿಕಾರ್ಜುನ ಹೊಸಪಾಳ್ಯ

ಹುಟ್ಟೂರು ತುಮಕೂರು ಜಿಲ್ಲೆಯ ಹೊಸಪಾಳ್ಯ. ಒಕ್ಕಲುತನದ ಕುಟುಂಬ. ಅರ್ಥಶಾಸ್ತ್ರ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ. ಹವ್ಯಾಸಿ ಬರಹಗಾರ. ದೇಸಿ ತಳಿ, ಜಲಸಂರಕ್ಷಣೆ, ಸುಸ್ಥಿರ ಕೃಷಿ, ಸಿರಿಧಾನ್ಯ ಚಟುವಟಿಕೆಗಳಿಗೆ ಬೆಂಬಲ; ಕಾರ್ಯಕ್ರಮ ಸಂಘಟನೆ.

'ನೆಟ್ಟಿರಾಗಿ', 'ಕೃಷಿ ಆಚರಣೆ', 'ಪೈರುಪಚ್ಚೆ', 'ಕೊರಲೆ', 'ಚೌಳು ನೆಲದ ಬಂಗಾರ', 'ಸಿರಿಧಾನ್ಯ ಪರಂಪರೆ', 'ನಶಿಸುತ್ತಿರುವ ನೀರಿನ ಜ್ಞಾನ', 'ತಲಪರಿಗೆ', 'ತೇಜಸ್ವಿ ನೆನಪಲ್ಲಿ ಅಲ್ಮೆರಾ ರಿಪೇರಿ' – ಇವು ಅವರು ಪ್ರಕಟಿಸಿದ ಕೆಲವು ಪುಸ್ತಕಗಳು.